**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನಸಭೆ**
**ಎಂಟನೇ ಅಧಿವೇಶನ**

# ಕರ್ನಾಟಕ ರಾಜ್ಯ ಮೋಟಾರು ವಾಹನಗಳ (ವಿಶೇಷ ಉಪಬಂಧಗಳ) ವಿಧೇಯಕ, 2015

**(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 36)**

ಮೋಟಾರು ವಾಹನಗಳ ಅಧಿನಿಯಮ, 1988ರ ಅಡಿಯಲ್ಲಿ ಅನುಮೋದಿತ ಸ್ಕೀಮುಗಳ ಪ್ರದೇಶಗಳ ಮತ್ತು ಆ ಅಧಿನಿಯಮದ ಅಧ್ಯಾಯ-VIರ ಅಡಿಯಲ್ಲಿನ ಅಧಿಸೂಚಿತ ಮಾರ್ಗಗಳ ಸಂಬಂಧದಲ್ಲಿ ಈಗಿರುವ ಮಜಲು ವಾಹನಗಳ (stage carriages) ಪರ್ಮಿಟ್ಟುದಾರರನ್ನು ಹಠಾತ್ತಾಗಿ ನಿಲ್ಲಿಸುವುದರಿಂದ ಪ್ರಯಾಣಿಸುತ್ತಿರುವ ಸಾರ್ವಜನಿಕರಿಗೆ ಆಗುವ ಅನಾನುಕೂಲತೆಯನ್ನು ತಪ್ಪಿಸುವುದಕ್ಕಾಗಿ ಕೆಲವು ವಿಶೇಷ ಉಪಬಂಧಗಳನ್ನು ರಚಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಒಂದು ವಿಧೇಯಕ.

ಬಿ.ಎ. ಲಿಂಗರೆಡ್ಡಿ ವಿರುದ್ಧ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ (2015 ಎಐಆರ್ ಎಸ್‌ಸಿಡಬ್ಲ್ಯು 279) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಅಪೀಲುದಾರನ ಪರವಾಗಿ ನಿರ್ದಿಷ್ಟ ಸಮರ್ಥನೆಯನ್ನು ಪರಿಗಣಿಸುವಾಗ ತೀರ್ಪುಜನ್ಯ ಕಾನೂನಿನ (case law) ಸಮಗ್ರ ಪರಿಶೀಲನೆಯ ತರುವಾಯ, ಅಧಿಸೂಚಿತ ಮಾರ್ಗವನ್ನು ಅತಿಕ್ರಮಿಸುವ ಅಥವಾ ನಿರಾಕರಿಸುವ (traverses) ಅಧಿಸೂಚಿತವಲ್ಲದ ಮಾರ್ಗಕ್ಕಾಗಿ ಪರ್ಮಿಟ್ಟನ್ನು ಮಂಜೂರು ಮಾಡಲು ಸಾಧ್ಯವಿಲ್ಲವೆಂದು ಪ್ರವರ್ಗೀಯವಾಗಿ (categorically) ಹೇಳಿರುವುದರಿಂದ ಮತ್ತು ಸ್ಕೀಮನ್ನು ಉಲ್ಲಂಘಿಸಿ ಮಂಜೂರು ಮಾಡಲಾದ ಪರ್ಮಿಟ್ಟುಗಳು ಕಾನೂನುಬಾಹಿರವೆಂದು ಘೋಷಿಸಿರುವುದರಿಂದ;

ಮತ್ತು, ಮೋಟಾರು ವಾಹನ ಅಧಿನಿಯಮ, 1988ರ 102ನೇ ಪ್ರಕರಣವು ಯಾವುದೇ ಅನುಮೋದಿತ ಸ್ಕೀಮನ್ನು ಮಾರ್ಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆಯಾದ್ದರಿಂದ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ವಿರುದ್ಧ ಅಶರಫುಲ್ಲಾ ಖಾನ್ (2002)2 ಎಸ್‌ಸಿಸಿ 560 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಪ್ರಯಾಣಿಸುವ ಸಾರ್ವಜನಿಕರ ಮನವಿಯ ಮೇರೆಗೆ ಅಥವಾ ಸಾರ್ವಜನಿಕರ ಬೇಡಿಕೆಯನ್ನು ಈಡೇರಿಸಲು, ರಾಜ್ಯ ಸಾರಿಗೆ ಉದ್ಯಮವು ವಾಹನ ಅಥವಾ ಮೂಲಸೌಕರ್ಯದ ರೂಪದಲ್ಲಿ ಅವಶ್ಯಕ ಸಂಪನ್ಮೂಲಗಳ ಕೊರತೆಯನ್ನು ಎದುರಿಸುತ್ತಿದೆ ಎಂಬುದರ ಆಧಾರದ ಮೇಲೆ, ಪ್ರಯಾಣಿಸುವ ಸಾರ್ವಜನಿಕರ ಅವಶ್ಯಕತೆ ಮತ್ತು ಅನುಕೂಲತೆಗೆ ಮಾತ್ರ ಮಾರ್ಪಾಟನ್ನು ಪರಿಣಾಮಕಾರಿಗೊಳಿಸಬಹುದು ಎಂದು ತೀರ್ಪು ನೀಡಿರುವುದರಿಂದ;

ಕರ್ನಾಟಕ ರಾಜ್ಯ ಸಾರಿಗೆ ಉದ್ಯಮವು ಕೂಡಲೇ ಅನುಮೋದಿತ ಯೋಜನೆಯ ಪ್ರದೇಶಗಳಲ್ಲಿ ಮಜಲು ವಾಹನಗಳನ್ನು ಪ್ರಾರಂಭಿಸಲು ತನ್ನ ಅಸಾಮರ್ಥ್ಯತೆಯನ್ನು ವ್ಯಕ್ತಪಡಿಸಿರುವುದರಿಂದ;

ಮೋಟಾರು ವಾಹನಗಳ ಅಧಿನಿಯಮ, 1988ರ ಅಡಿಯಲ್ಲಿ ಅನುಮೋದಿತ ಸ್ಕೀಮುಗಳ ಪ್ರದೇಶಗಳ ಮತ್ತು ಆ ಅಧಿನಿಯಮದ ಅಧ್ಯಾಯ–VIರ ಅಡಿಯಲ್ಲಿನ ಅಧಿಸೂಚಿತ ಮಾರ್ಗಗಳ ಸಂಬಂಧದಲ್ಲಿ ಈಗಿರುವ ಮಜಲು ವಾಹನಗಳ ಖಾಸಗಿ ಪರ್ಮಿಟ್ಟುದಾರರನ್ನು ಹಠಾತ್ತಾಗಿ ನಿಲ್ಲಿಸುವುದರಿಂದ ಪ್ರಯಾಣಿಸುತ್ತಿರುವ ಸಾರ್ವಜನಿಕರಿಗೆ ಆಗುವ ಅನಾನುಕೂಲತೆಯನ್ನು ತಪ್ಪಿಸುವುದಕ್ಕಾಗಿ ಕೆಲವು ವಿಶೇಷ ಉಪಬಂಧಗಳನ್ನು ರಚಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಮೋಟಾರು ವಾಹನಗಳ (ವಿಶೇಷ ಉಪಬಂಧಗಳ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು, ಅನುಮೋದಿತ ಸ್ಕೀಮುಗಳ ಪ್ರದೇಶಗಳಲ್ಲಿನ ಕರ್ನಾಟಕ ರಾಜ್ಯದ ಭಾಗಕ್ಕೆ ಅಥವಾ ಮೋಟಾರು ವಾಹನಗಳ ಅಧಿನಿಯಮ, 1939ರ ಅಡಿಯಲ್ಲಿ ಪ್ರಖ್ಯಾಪಿಸಿದ ಕೋಲಾರ ಸ್ಕೀಮು, ಬಳ್ಳಾರಿ ಸ್ಕೀಮು, ಬೆಂಗಳೂರು ಸ್ಕೀಮು, ಬಿಟಿಎಸ್ ಸ್ಕೀಮು, ಮೈಸೂರು ಸ್ಕೀಮು ಮತ್ತು ಕನಕಪುರ ಸ್ಕೀಮುಗಳ ಮಾರ್ಗಗಳಿಗೆ ವ್ಯಾಪ್ತವಾಗುತ್ತದೆ.

(3) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**– (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅನುಮೋದಿತ ಸ್ಕೀಮುಗಳು" ಎಂದರೆ,–

(i) ಮೋಟಾರು ವಾಹನಗಳ ಅಧಿನಿಯಮ, 1939ರ 68ಡಿ ಪ್ರಕರಣದ (3)ನೇ ಉಪಪ್ರಕರಣದ ಅಡಿ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 70(2) ಟಿಎಂಪಿ 64, ದಿನಾಂಕ: 10.01.1968ರಲ್ಲಿ ಪ್ರಕಟಿಸಿದ ಮತ್ತು ಅಧಿಸೂಚನೆ ಸಂಖ್ಯೆ: 1 ಹೆಚ್‌ಡಿ 45 ಟಿಎಂಐ 76, ದಿನಾಂಕ: 10.01.1980ರಲ್ಲಿ ಮತ್ತಷ್ಟು ಮಾರ್ಪಾಟಾದ ಕೋಲಾರ ಸ್ಕೀಮು;

(ii) ಮೋಟಾರು ವಾಹನ ಅಧಿನಿಯಮ, 1939ರ 68ಡಿ ಪ್ರಕರಣದ ಅಡಿ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 200 ಟಿಎಂಪಿ 60, ದಿನಾಂಕ: 10.11.1960ರಲ್ಲಿ ಪ್ರಕಟಿಸಿದ ಮೈಸೂರು ಸ್ಕೀಮು;

(iii) ಮೋಟಾರು ವಾಹನ ಅಧಿನಿಯಮ, 1939ರ 68ಡಿ ಪ್ರಕರಣದ ಅಡಿ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 172(2) ಟಿಎಂಪಿ 60, ದಿನಾಂಕ: 07.06.1960ರಲ್ಲಿ ಪ್ರಕಟಿಸಿದ ಬೆಂಗಳೂರು ಸ್ಕೀಮು;

(iv) ಮೋಟಾರು ವಾಹನ ಅಧಿನಿಯಮ, 1939ರ 68ಡಿ ಪ್ರಕರಣದ ಅಡಿ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 202 ಟಿಎಂಪಿ 60, ದಿನಾಂಕ: 16.01.1961ರಲ್ಲಿ ಪ್ರಕಟಿಸಿದ ಬಿಟಿಎಸ್ ಸ್ಕೀಮು;

(v) ಮೋಟಾರು ವಾಹನ ಅಧಿನಿಯಮ, 1939ರ 68ಡಿ ಪ್ರಕರಣದ ಅಡಿ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 141 ಟಿಎಂಪಿ 65, ದಿನಾಂಕ: 30.12.1965ರಲ್ಲಿ ಪ್ರಕಟಿಸಿದ ಕನಕಪುರ ಸ್ಕೀಮು;

(vi) ಮೋಟಾರು ವಾಹನಗಳ ಅಧಿನಿಯಮ, 1939ರ 68ಡಿ ಪ್ರಕರಣದ ಅಡಿ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 22 ಟಿಎಂಪಿ 64, ದಿನಾಂಕ: 18.04.1964ರಲ್ಲಿ ಪ್ರಕಟಿಸಿದ ಮತ್ತು ಅಧಿಸೂಚನೆ ಸಂಖ್ಯೆ: ಹೆಚ್‌ಡಿ 45 ಟಿಎಂಪಿ 76, ದಿನಾಂಕ: 10.01.1980ರಲ್ಲಿ ಮತ್ತಷ್ಟು ಮಾರ್ಪಾಟಾದ ಬಳ್ಳಾರಿ ಸ್ಕೀಮು.

(ಬಿ) "ನ್ಯಾಯಾಲಯಗಳು" ಎಂದರೆ, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಭಾರತದ ಸರ್ವೋಚ್ಚ ನ್ಯಾಯಾಲಯ;

(ಸಿ) "ಈಗಿರುವ ಪರ್ಮಿಟ್ಟುದಾರ" ಎಂದರೆ, ಮೋಟಾರು ವಾಹನಗಳ ಅಧಿನಿಯಮ, 1939ರ ಅಡಿಯಲ್ಲಾಗಲಿ ಅಥವಾ ಮೋಟಾರು ವಾಹನಗಳ ಅಧಿನಿಯಮ, 1988ರ ಅಡಿಯಲ್ಲಾಗಲಿ ಮಂಜೂರಾದ ಮಜಲು ವಾಹನ ಪರ್ಮಿಟ್ಟನ್ನು ಹೊಂದಿರುವ ಮತ್ತು ಅನುಮೋದಿತ ಸ್ಕೀಮು ಅಥವಾ ಮಾರ್ಗಗಳ ಪ್ರದೇಶಗಳಲ್ಲಿ ಅಥವಾ ಅನುಮೋದಿತ ಸ್ಕೀಮು ಅಥವಾ ಮಾರ್ಗಗಳ ಪ್ರದೇಶಗಳ ಭಾಗದಲ್ಲಿ ಕಾರ್ಯಾಚರಣೆ ಮಾಡಲು ಪರ್ಮಿಟ್ಟು ಪಡೆದ ಮತ್ತು ದಿನಾಂಕ: 17.12.2014ರಂದು ಮಜಲು ವಾಹನ ಸೇವೆಗಳನ್ನು ನಿರ್ವಹಿಸುತ್ತಿರುವ ಖಾಸಗಿ ನಿರ್ವಾಹಕ;

(ಡಿ) "ಮೋಟಾರು ವಾಹನಗಳ ಅಧಿನಿಯಮ" ಎಂದರೆ, ಮೋಟಾರು ವಾಹನಗಳ ಅಧಿನಿಯಮ, 1988 (1988ರ ಕೇಂದ್ರ ಅಧಿನಿಯಮ ಸಂಖ್ಯೆ 59);

(ಇ) "ಅಧಿಸೂಚಿತ ಮಾರ್ಗ" ಎಂಬ ಪದಾವಳಿಯು ಮೋಟಾರು ವಾಹನಗಳ ಅಧಿನಿಯಮದ 100ನೇ ಪ್ರಕರಣದಲ್ಲಿ ಹೊಂದಿರುವಂಥ ಅದೇ ಅರ್ಥವನ್ನೇ ಹೊಂದಿರತಕ್ಕದ್ದು.

(2) ಇದರಲ್ಲಿ ಬಳಸಿದ ಮತ್ತು ಪರಿಭಾಷಿಸಿರದ ಆದರೆ ಮೋಟಾರು ವಾಹನಗಳ ಅಧಿನಿಯಮದಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು, ಆ ಅಧಿನಿಯಮದಲ್ಲಿ ಅವುಗಳಿಗೆ ಕ್ರಮವಾಗಿ ಗೊತ್ತುಪಡಿಸಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ಕೆಲವು ಸನ್ನಿವೇಶಗಳಲ್ಲಿ ಪರ್ಮಿಟ್ಟಿನ ಮಂಜೂರಾತಿ.–** ಮೋಟಾರು ವಾಹನಗಳ ಅಧಿನಿಯಮದ ಅಧ್ಯಾಯ–VIರಲ್ಲಿ ಅಥವಾ ಕರ್ನಾಟಕ ರಾಜ್ಯ ಸಾರಿಗೆ ಅಪೀಲು ನ್ಯಾಯಾಧಿಕರಣ ಅಥವಾ ಯಾವುವೇ

ನ್ಯಾಯಾಲಯಗಳು ಅಥವಾ ಸಂದರ್ಭಾನುಸಾರವಾಗಿ ಪ್ರಾಧಿಕಾರಗಳು ನೀಡಿದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಅನುಮೋದಿತ ಸ್ಕೀಮುಗಳು ಅಥವಾ ಮಾರ್ಗಗಳ ಪ್ರದೇಶಗಳಲ್ಲಿ ಪರ್ಮಿಟ್ಟು ಮಂಜೂರಾತಿಗಾಗಿ, ಈ ಅಧಿನಿಯಮಕ್ಕೆ ಅನುಸಾರವಾಗಿ ಸಲ್ಲಿಸಿದ ಅರ್ಜಿಯ ಆಧಾರದ ಮೇಲೆ, ಜಿಲ್ಲೆಯ ಒಳಗಿನ ಮಾರ್ಗಕ್ಕೆ ಅಥವಾ ಜಿಲ್ಲೆಗಳ ನಡುವಿನ ಮಾರ್ಗಕ್ಕೆ ಅಥವಾ ಮೋಟಾರು ವಾಹನಗಳ ಅಧಿನಿಯಮ, 1939ರ ಅಥವಾ ಮೋಟಾರು ವಾಹನಗಳ ಅಧಿನಿಯಮಕ್ಕೆ ಅನುಸಾರವಾಗಿ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಯಾವುವೇ ಇತರ ರಾಜ್ಯಗಳ ನಡುವೆ ಆದ ಅಂತರ್ ರಾಜ್ಯ ಒಪ್ಪಂದದ ಮೇರೆಗೆ ಗುರುತಿಸಲಾದ ಮಾರ್ಗಗಳು ಮತ್ತು ಪ್ರಯಾಣಗಳಲ್ಲಿ (trips) ಅಂತರ್ ರಾಜ್ಯ ಮಾರ್ಗಗಳಿಗೆ ಖಾಸಗಿ ಪರ್ಮಿಟ್ಟುದಾರರು ಈ ಮಾರ್ಗಗಳಲ್ಲಿ ಕಾರ್ಯಾಚಾರಣೆಯನ್ನು ಮಾಡಲು ಅನುಭವವನ್ನು ಹೊಂದಿರುವುದರಿಂದ ಅವರಿಗೆ ಆದ್ಯತೆಯನ್ನು ನೀಡಿ 4ನೇ ಪ್ರಕರಣದ ಅಡಿಯಲ್ಲಿ ತಾತ್ಕಾಲಿಕ ಪರ್ಮಿಟ್ಟನ್ನು ಮಂಜೂರು ಮಾಡಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ ಮಂಜೂರು ಮಾಡಿದ ಪರ್ಮಿಟ್ಟುಗಳು, ಮೋಟಾರು ವಾಹನಗಳ ಅಧಿನಿಯಮದ ಅಧ್ಯಾಯ-Vರ ಅಡಿಯಲ್ಲಿ ಪರ್ಮಿಟ್ಟನ್ನು ಮಂಜೂರು ಮಾಡಿದ್ದರೆ ಹೇಗೋ ಹಾಗೆಯೇ ಪರಿಣಾಮವನ್ನು ಹೊಂದಿರತಕ್ಕದ್ದು.

4. **ತಾತ್ಕಾಲಿಕ ಪರ್ಮಿಟ್ಟನ್ನು ನೀಡುವುದು.-** ರಾಜ್ಯ ಸಾರಿಗೆ ಪ್ರಾಧಿಕಾರವು ಅಥವಾ ಸಂದರ್ಭಾನುಸಾರವಾಗಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಈ ಅಧಿನಿಯಮವು ಜಾರಿಯಾದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಈಗಿರುವ ಪರ್ಮಿಟ್ಟುದಾರರನ್ನೂ ಒಳಗೊಂಡಂತೆ, ಈ ಅಧಿನಿಯಮದ ಅಡಿಯಲ್ಲಿ ಪರ್ಮಿಟ್ಟುಗಳ ಮಂಜೂರಾತಿಗಾಗಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು. ತದನಂತರ ಸಂಬಂಧಪಟ್ಟ ಪ್ರಾಧಿಕಾರವು, ಈಗಿರುವ ಪರ್ಮಿಟ್ಟುಗಳಿಗೆ ಆದ್ಯತೆಯನ್ನು ನೀಡಿ ಪರ್ಮಿಟ್ಟುಗಳ ಮಂಜೂರಾತಿಗಾಗಿನ ಅರ್ಜಿಗಳನ್ನು ಮೂವತ್ತು ದಿನಗಳೊಳಗೆ ವಿಲೆ ಮಾಡತಕ್ಕದ್ದು:

ಪರಂತು, ಮೋಟಾರು ವಾಹನಗಳ ಅಧಿನಿಯಮದ 87ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ಮೊದಲ ಹಂತದಲ್ಲಿ ತಾತ್ಕಾಲಿಕ ಪರ್ಮಿಟ್ಟುಗಳನ್ನು ಮಂಜೂರು ಮಾಡತಕ್ಕದ್ದು. ಅದನ್ನು ಒಂದು ವರ್ಷದವರೆಗೆ ಅಥವಾ ರಾಜ್ಯ ಸಾರಿಗೆ ಉದ್ಯಮಗಳು ಅವರ ಸೇವೆಗಳ ಕಾರ್ಯಾಚರಣೆಯನ್ನು ಆರಂಭಿಸುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸತಕ್ಕದ್ದು.

5. **ಮೋಟಾರು ವಾಹನಗಳ ಅಧಿನಿಯಮಕ್ಕೆ ಉಲ್ಲೇಖದ ಅರ್ಥೈಸುವಿಕೆ.-** ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದುದನ್ನು ಹೊರತುಪಡಿಸಿ, ಮೋಟಾರು ವಾಹನ ಅಧಿನಿಯಮದ ಯಾವುವೇ ಉಪಬಂಧಗಳಿಗೆ ಅಥವಾ ಯಾವುದೇ ಅಧ್ಯಾಯಕ್ಕೆ ಈ ಅಧಿನಿಯಮದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು ಮೋಟಾರು ವಾಹನಗಳ ಅಧಿನಿಯಮದ ಸಂವಾದಿ ಉಪಬಂಧಗಳು ಅಥವಾ ಅಧ್ಯಾಯಕ್ಕೆ ಉಲ್ಲೇಖ ಎಂಬಂತೆ ಅನ್ವಯಿಸತಕ್ಕದ್ದು.

6. **ಉಳಿಸುವಿಕೆಗಳು.–** ಈ ಅಧಿನಿಯಮದಲ್ಲಿ ಉಪಬಂಧಿಸಿದುದನ್ನು ಉಳಿದು, ಈ ಅಧಿನಿಯಮದ ಉಪಬಂಧವು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಜೊತೆಗೆ ಇರತಕ್ಕದ್ದು ಮತ್ತು ಅದನ್ನು ನ್ಯೂನಗೊಳಿಸತಕ್ಕದ್ದಲ್ಲ ಹಾಗೂ ಇದರಲ್ಲಿರುವುದು ಯಾವುದೂ, ಯಾವೊಬ್ಬ ವ್ಯಕ್ತಿಯನ್ನು ತನಿಖೆ ಮಾಡುವುದರಿಂದ ಅಥವಾ ಅನ್ಯಥಾ, ಈ ಅಧಿನಿಯಮವನ್ನು ಹೊರತುಪಡಿಸಿ, ಆತನ ವಿರುದ್ಧ ಹೂಡಬಹುದಾಗಿರುವ ಯಾವುದೇ ವ್ಯವಹರಣೆಯಿಂದ ವಿನಾಯಿತಿಗೊಳಿಸತಕ್ಕದ್ದಲ್ಲ.

7. **ತೊಂದರೆಗಳ ನಿವಾರಣೆ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ತೊಂದರೆ ನಿವಾರಣೆಗಾಗಿ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಅಂಥ ಉಪಬಂಧವನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಆದೇಶವನ್ನು ಹೊರಡಿಸತಕ್ಕದ್ದಲ್ಲ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಬಿ.ಎ. ಲಿಂಗರೆಡ್ಡಿ ವಿರುದ್ಧ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ (2015 ಎಐಆರ್ ಎಸ್‌ಸಿಡಬ್ಲ್ಯು 279) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಅಪೀಲುದಾರನ ಪರವಾಗಿ ನಿರ್ದಿಷ್ಟ ಸಮರ್ಥನೆಯನ್ನು ಪರಿಗಣಿಸುವಾಗ ತೀರ್ಪುಜನ್ಯ ಕಾನೂನಿನ (case law) ಸಮಗ್ರ ಪರಿಶೀಲನೆಯ ತರುವಾಯ, ಅಧಿಸೂಚಿತ ಮಾರ್ಗವನ್ನು ಅತಿಕ್ರಮಿಸುವ ಅಥವಾ ನಿರಾಕರಿಸುವ (traverses) ಅಧಿಸೂಚಿತವಲ್ಲದ ಮಾರ್ಗಕ್ಕಾಗಿ ಪರ್ಮಿಟ್ಟನ್ನು ಮಂಜೂರು ಮಾಡಲು ಸಾಧ್ಯವಿಲ್ಲವೆಂದು ಪ್ರವರ್ಗೀಯವಾಗಿ (categorically) ಹೇಳಿರುವುದರಿಂದ ಮತ್ತು ಸ್ಕೀಮನ್ನು ಉಲ್ಲಂಘಿಸಿ ಮಂಜೂರು ಮಾಡಲಾದ ಪರ್ಮಿಟ್ಟುಗಳು ಕಾನೂನುಬಾಹಿರವೆಂದು ಘೋಷಿಸಿದೆ.

ಮತ್ತು, ಮೋಟಾರು ವಾಹನ ಅಧಿನಿಯಮ, 1988ರ 102ನೇ ಪ್ರಕರಣವು ಯಾವುದೇ ಅನುಮೋದಿತ ಸ್ಕೀಮನ್ನು ಮಾರ್ಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆಯಾದ್ದರಿಂದ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ವಿರುದ್ಧ ಅಶರಫುಲ್ಲಾ ಖಾನ್ (2002)2 ಎಸ್‌ಸಿಸಿ 560 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಪ್ರಯಾಣಿಸುವ ಸಾರ್ವಜನಿಕರ ಮನವಿಯ ಮೇರೆಗೆ ಅಥವಾ ಸಾರ್ವಜನಿಕರ ಬೇಡಿಕೆಯನ್ನು ಈಡೇರಿಸಲು, ರಾಜ್ಯ ಸಾರಿಗೆ ಉದ್ಯಮವು ವಾಹನ ಅಥವಾ ಮೂಲಸೌಕರ್ಯದ ರೂಪದಲ್ಲಿ ಅವಶ್ಯಕ ಸಂಪನ್ಮೂಲಗಳ ಕೊರತೆಯನ್ನು ಎದುರಿಸುತ್ತಿದೆ ಎಂಬುದರ ಆಧಾರದ ಮೇಲೆ, ಪ್ರಯಾಣಿಸುವ ಸಾರ್ವಜನಿಕರ ಅವಶ್ಯಕತೆ ಮತ್ತು ಅನುಕೂಲತೆಗೆ ಮಾತ್ರ ಮಾರ್ಪಾಟನ್ನು ಪರಿಣಾಮಕಾರಿಗೊಳಿಸಬಹುದು ಎಂದು ತೀರ್ಪು ನೀಡಿರುವುದರಿಂದ ಕರ್ನಾಟಕ ರಾಜ್ಯ ಸಾರಿಗೆ ಉದ್ಯಮವು ಕೂಡಲೇ ಅನುಮೋದಿತ ಯೋಜನೆಯ ಪ್ರದೇಶಗಳಲ್ಲಿ ಮಜಲು ವಾಹನಗಳನ್ನು ಪ್ರಾರಂಭಿಸಲು ತನ್ನ ಅಸಾಮರ್ಥ್ಯತೆಯನ್ನು ವ್ಯಕ್ತಪಡಿಸಿರುತ್ತದೆ.

ಆದ್ದರಿಂದ, ಮೋಟಾರು ವಾಹನಗಳ ಅಧಿನಿಯಮ, 1988ರ ಅಡಿಯಲ್ಲಿ ಅನುಮೋದಿತ ಸ್ಕೀಮುಗಳ ಪ್ರದೇಶಗಳ ಮತ್ತು ಆ ಅಧಿನಿಯಮದ ಅಧ್ಯಾಯ-VIರ ಅಡಿಯಲ್ಲಿನ ಅಧಿಸೂಚಿತ ಮಾರ್ಗಗಳ ಸಂಬಂಧದಲ್ಲಿ ಈಗಿರುವ ಮಜಲು ವಾಹನಗಳ ಖಾಸಗಿ ಪರ್ಮಿಟ್ಟುದಾರರನ್ನು ಹಠಾತ್ತಾಗಿ ನಿಲ್ಲಿಸುವುದರಿಂದ ಪ್ರಯಾಣಿಸುತ್ತಿರುವ ಸಾರ್ವಜನಿಕರಿಗೆ ಆಗುವ ಅನಾನುಕೂಲತೆಯನ್ನು ತಪ್ಪಿಸುವುದಕ್ಕಾಗಿ, ದೈನಂದಿನ ಅಗತ್ಯವನ್ನು ಪೂರೈಸುವುದಕ್ಕೆ ತಾತ್ಕಾಲಿಕ ಪರ್ಮಿಟ್ಟುಗಳನ್ನು ನೀಡಲು ಸಾಧ್ಯವಾಗುವಂತೆ ಮಾಡಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ರಾಮಲಿಂಗಾ ರೆಡ್ಡಿ**
ಸಾರಿಗೆ ಸಚಿವರು

**ಎಂ. ಗುರುರಾಜ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ , 750–ಪ್ರತಿಗಳು 31ನೇ ಜುಲೈ, 2015

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**EIGHTH SESSION**

# THE KARNATAKA STATE MOTOR VEHICLE (SPECIAL PROVISIONS) BILL, 2015

**(L.A. Bill No. 36 of 2015)**

A Bill to make certain special provisions, to prevent inconvenience to the travelling public by the sudden stoppage of the existing permit holders of stage carriages under the Motor Vehicles Act, 1988 in relation to the areas of approved schemes and routes notified under Chapter-VI of that Act and to provide for matters connected therewith or incidental thereto.

Whereas the Hon'ble Supreme Court in B.A Lingareddy Vs Karnataka State Transport Authority (2015 AIR SCW 279), after exhaustive review of the case law while considering the specific assertion on behalf of the appellant, it categorically laid down that a permit cannot be granted for a non-notified route which overlap or traverses the notified route and declared the permits granted contrary to the scheme are illegal.

And whereas section 102 of the Motor Vehicle Act, 1988 empowers the State Government to modify any approved scheme. The Supreme Court in Karnataka State Road Transport Corporation Vs Asharafulla Khan(2002)2 SCC 560 has held that modification may be effected only to need and convenient of the travelling public on representation of the travelling public or on the ground that the State Transport undertaking lacks the necessary resources in the form of vehicle or infrastructure to meet the public demand.

Whereas the Karnataka State Transport undertaking has expressed its inability to start stage carriage vehicles in the areas of approved scheme immediately.

Whereas it is expedient to make certain special provisions to prevent inconvenience to travelling public by sudden stoppage of existing permit holders of private stage carriage under the Motor Vehicles Act, 1988 in relation to the areas of approved schemes and routes notified under Chapter-VI of that Act and to provide for matters connected therewith or incidental thereto;

Be it enacted by the Karnataka State Legislature in the sixty-sixth year of the Republic of India as follows :-

**1. Short title, extent and commencement.-** (1) This Act may be called the Karnataka State Motor Vehicles (Special Provisions) Act, 2015.

(2) It extends to part of Karnataka State on the areas of approved Schemes or routes of Kolar Scheme, Bellary Scheme, Bangalore Scheme, BTS Scheme, Mysore Scheme and Kanakapura Schemes promulgated under the Motor Vehicles Act, 1939.

(3) It shall come into force at once.

**2. Definitions.-** (1) In this Act, unless the context otherwise requires,-

(a) "approved schemes" means,-

(i) The Kolar Scheme published under sub-section (3) of section 68D of the Motor Vehicle Act, 1939 in Notification No. HD 70(2) TMP 64, dated:10.01.1968 and further modified in Notification No. 1 HD 45 TMI 76, dated: 10.01.1980;

(ii) The Mysore Scheme published under section 68D of the Motor Vehicle Act, 1939 in Notification No. HD 200 TMP 60, dated: 10.11.1960;

(iii) The Bangalore Scheme published under section 68D of the Motor Vehicle Act, 1939 in Notification No.HD 172 (2) TMP 60 dated 07.06.1960.

(iv) The BTS Scheme published under section 68D of the Motor Vehicle Act, 1939 in Notification No. HD 202 TMP 60, dated 16.01.1961.

(v) The Kanakapura Scheme published under section 68D of the Motor Vehicle Act, 1939 in Notification No. HD 141 TMP 65, dated 30.12.1965.

(vi) The Bellary Scheme published under section 68D of the Motor Vehicle Act, 1939 in Notification No.HD 22 TMP 64, dated 18.04.1964 and further modified in Notification No. HD 45 TMP 76, dated 10.01.1980.

(b) "Courts" means the High Court of Karnataka and the Supreme Court of India;

(c) "Existing permit holder" means the private operator holding the stage carriage permit granted either under the Motor Vehicles Act, 1939 or under the Motor Vehicles Act, 1988 and obtained permit to operate on the areas of approved Scheme or routes or portion of the areas of approved Scheme or routes and operating the stage carriage services as on 17.12.2014;

(d) "Motor Vehicles Act" means the Motor Vehicles Act, 1988 (Central Act No. 59 of 1988);

(e) The expression "notified route" shall have the same meaning as in section 100 of the Motor Vehicles Act.

(2) Words and expressions used herein and not defined but defined in the Motor Vehicles Act shall have the meanings respectively assigned to them in that Act.

**3. Grant of permit under certain circumstances.-** Notwithstanding anything contained in the Chapter-VI of the Motor Vehicles Act or in any Judgement, decree or order passed by the Karnataka State Transport

Appellant Tribunal or by any Courts or Authority, as the case may be, the State Transport Authority or the Regional Transport Authority on an application made to it in accordance with this Act for grant a permit by the existing permit holders on the areas of approved Schemes or routes, may grant temporary permit under section 4, for the intra District route or inter District route or for interstate route on the routes and trips recognized under the inter state Agreement between the State Government of Karnataka and any other states in accordance with the Motor Vehicles Act, 1939 or the Motor Vehicles Act by preferring the existing permit holder. Since they have experience in operating with these routes.

Provided that the permits granted under this section shall have the same effect as if the permit is granted under Chapter-V of the Motor Vehicles Act.

**4. Issue of temporary permits.-** The State Transport Authority or the Regional Transport Authority, as the case may be, shall receive the applications including existing permit holders for grant of permits under this Act within thirty days from the date of this Act come into force. The authority concerned shall dispose of the applications for grant of permits within thirty days thereafter by preferring existing permits.

Provided that, the temporary permits shall be granted in accordance with the procedure specified in section 87 of the Motor Vehicles Act at the first instance, which can be extended for one year or till the State Transport Undertakings starts operating their services whichever is earlier.

**5. Construction of reference to Motor Vehicles Act.-** The reference in this Act to any of the provisions or any chapter of the Motor Vehicle Act other than the one specified in this Act be construed as reference to the corresponding provisions or chapter of the Motor Vehicles Act.

**6. Savings.-** Save as otherwise provided in this Act, the provision of this Act shall be in addition to and not in derogation of any other law for the

time being in force and nothing contained herein shall exempt any person from any proceeding by way of investigation or otherwise which might, apart from this Act, be instituted against him.

**7. Removal of difficulties.-** If any difficulty arises in giving effect to the provisions of this Act, the State Government may by notification, make such provision not in consistent with the provisions of this Act, as appear to it to be necessary or expedient for removing the difficulty:

Provided that no such order shall be issued after the expiry of two years from the date of commencement of this Act.

## STATEMENT OF OBJECTS AND REASONS

The Hon'ble Supreme Court in B.A Lingareddy Vs Karnataka State Transport Authority (2015 AIR SCW 279), after exhaustive review of the case law while considering the specific assertion on behalf of the appellant, it categorically laid down that a permit cannot be granted for a non-notified route which overlap or traverses the notified route and declared the permits granted contrary to the scheme are illegal.

And whereas section 102 of the Motor Vehicle Act, 1988 empowers the State Government to modify any approved scheme. The Supreme Court in Karnataka State Road Transport Corporation Vs Asharafulla Khan(2002)2 SCC 560 has held that modification may be effected only to need and convenient of the travelling public on representation of the travelling public or on the ground that the State Transport undertaking lacks the necessary resources in the form of vehicle or infrastructure to meet the public demand. The Karnataka State Transport undertaking has expressed its inability to start stage carriage vehicles in the areas of approved scheme immediately.

Therefore, it is considered necessary to make certain special provisions to prevent inconvenience to travelling public by sudden stoppage of existing permit holders of private stage carriage under the Motor Vehicles Act, 1988 in relation to the areas of approved schemes and routes notified under Chapter-VI of that Act and to provide for an enabling provision to issue temporary permits to meet the need of the day and matters connected therewith or incidental thereto;

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**RAMALINGA REDDY**
Minister for Transport

**M. GURURAJA**
Secretary
Karnataka Legislative Assembly

Government Press, Vikasa Soudha, Bengaluru, P7, W.D. , Copies 750, 31st, 2015